APPNENDIX - XI

# BUILDING SAFETY CERTIFICATE

No. Dated: 15/12/2023

Certified that the existing building SRI MANJUNATHASWAMY VIDYANIKETHAN at THALAGATTAPURA, KANAKAPURA MAIN ROAD, BANGALORE, KARNATAKA BANGALORE URBAN Pincode : 560062 comprised of One Building Block , One Ground Floor and Three Upper Floors owned/occupied by SRI MANJUNATHASWAMY VIDYANIKETHAN have complied with the Building safety requirements in accordance with National Building code Rules, and verified by the officers concerned of Public Works Department On 07/12/2023 in the presence of Mr. AMRUTHRAJ.M, PRESIDENT, SRI MANJUNATHASWAMY VIDYANIKETHAN, THALAGATTAPURA, KANAKAPURA MAIN ROAD, BANGALORE, KARNATAKA BANGALORE URBAN, Pincode : 560062 and that the building/premises is fit for occupancy upto classes X with effect from 15/12/2023 to 14/12/2026 for a period of 3 (three) years in accordance with rule and subject to compliance of the specific conditions as appended.

1. Proper periodic maintenance of the Building
2. No additional floor construction in the Building
3. Water tanks for water supply & Fire Fighting to be placed at designated places

Issued on 15/12/2023 at Bangalore by

15/12/23

Assistant Executive Engineer
No. 9 Buildings Sub Division
K.R. Circle, Bangalore-560001

**Signature with Seal :**

**Name :** ANIL SHOURI K R

**Designation :** A.E.E.

**Name & Address of Department/ Office:** PWD.

**(Assistant Engineer & above officer of concerned Govt. Department only)**

**Note:** This certificate should be signed / issued by Assistant Engineer & above officer of concerned Govt. Department only

* **The filled up certificate should be either in Hindi or English. If it is issued in vernacular language, translated notarized version in English be uploaded along with the original vernacular certificate as a single pdf.**

ಕಾರ್ಯಪಾಲಕ ಅಭಿಯಂತರರವರ ಕಛೇರಿ,
ನಂ.2 ನೇ ಕಟ್ಟಡಗಳ ವಿಭಾಗ,
ಲೋ.ಇ ಅನೆಕ್ಸ್‌ಕಟ್ಟಡ, 1ನೇ ಮಹಡಿ,
ಕೆ.ಆರ್.ವೃತ್ತ, ಬೆಂಗಳೂರು 01.

ದೂರವಾಣಿ : 080-22122856
ಫ್ಯಾಕ್ಸ್: 080-22123368
ಇಮೇಲ್:eebldno2@gmail.com

ಲೋಕೋಪಯೋಗಿ ಇಲಾಖೆ

ಸಂಖ್ಯೆ:ಕಾನಿಇಂ:ಕವಿ2:ಆ.ಶಾ:23-24 / 6657-59        ದಿನಾಂಕ: 08/12/2023

ಇವರಿಗೆ:
ಶ್ರೀ ಮಂಜುನಾಥಸ್ವಾಮಿ ವಿದ್ಯಾನಿಕೇತನ್,
ತಲಘಟ್ಟಪುರ, ಕನಕಪುರ ಮೇನ್ ರೋಡ್,
ಬೆಂಗಳೂರು-560062.

ಮಾನ್ಯರೆ,

| | |
|---|---|
| ವಿಷಯ | 2023-2024ನೇ ಸಾಲಿನ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರ ನೀಡುವ ಬಗ್ಗೆ. |
| ಉಲ್ಲೇಖ | 1. ತಮ್ಮ ಮನವಿ ಪತ್ರ ದಿನಾಂಕ 28-11-2023.<br>2.ಕರ್ನಾಟಕ ಸರ್ಕಾರ ಸಚಿವಾಲಯದ ಸುತ್ತೋಲೆ ತಿದ್ದುಪಡಿ ದಿ: 06.05.22.<br>3.ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.9ನೇ ಕಟ್ಟಡಗಳ ಉಪ ವಿಭಾಗ, ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ:996, ದಿ: 04.12.2023. |

.......................

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಪತ್ರದಲ್ಲಿ **ಶ್ರೀ ಮಂಜುನಾಥಸ್ವಾಮಿ ವಿದ್ಯಾನಿಕೇತನ್, ತಲಘಟ್ಟಪುರ, ಕನಕಪುರ ಮೇನ್ ರೋಡ್, ಬೆಂಗಳೂರು-560062** ಶಾಲಾ ಕಟ್ಟಡಕ್ಕೆ ಸಂಬಂಧಿಸಿದಂತೆ ಸುರಕ್ಷತಾ ಪ್ರಮಾಣ ಪತ್ರವನ್ನು ಕೋರಿರುತ್ತೀರಿ.

ಉಲ್ಲೇಖ (2)ರ ಸರ್ಕಾರದ ಸುತ್ತೋಲೆ ತಿದ್ದುಪಡಿಯ ಅನುಸಾರ ಲೋಕೋಪಯೋಗಿ ಇಲಾಖೆ ಸಂಹಿತೆಯ ಅನ್ವಯ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರವನ್ನು ಈ ಕಛೇರಿಯಿಂದ ಪಡೆಯಲು ಮೌಲ್ಯ ರೂ.5,000.00 ವನ್ನು (ಡಿಡಿ ಸಂಖ್ಯೆ: 000578 ದಿನಾಂಕ:08-12-2023) ಈ ಕಛೇರಿಗೆ ಸಲ್ಲಿಸಿರುತ್ತೀರಿ.

ಮುಂದುವರೆದು, ದಿನಾಂಕ 04-12-2023 ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.9ನೇ ಕಟ್ಟಡಗಳ ಉಪವಿಭಾಗ, ಬೆಂಗಳೂರು ರವರು ಸ್ಥಳ ಪರಿವೀಕ್ಷಣೆ ಕೈಗೊಂಡಿರುತ್ತಾರೆ. ಉಲ್ಲೇಖಿತ (3)ರ ಪತ್ರದಲ್ಲಿ ಕೈಗೊಂಡಿರುವ ಪರೀಕ್ಷೆಗಳು ಹಾಗೂ ಉಲ್ಲೇಖ (2)ರ ಸರ್ಕಾರದ ಸುತ್ತೋಲೆಯನ್ವಯ ಸಹಾಯಕ ಕಾರ್ಯಪಾಲಕ ಅಭಿಯಂತರರವರು ಪರಿವೀಕ್ಷಿಸಿ ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ, ಸದರಿ ಶಾಲೆಯ "STRUCTURALLY STABLE" ಎಂದು ಪರಿಗಣಿಸಿ ನಿರಾಕ್ಷೇಪಣಾ ಪತ್ರವನ್ನು ದಿನಾಂಕ: **08.12.2023 ರಿಂದ 07.12.2024 ರ ವರೆಗೆ** ನೀಡಲಾಗಿದೆ.

ತಮ್ಮ ವಿಶ್ವಾಸಿ,

8/12/2023
ಕಾರ್ಯಪಾಲಕ ಅಭಿಯಂತರರು,
ನಂ.2ನೇ ಕಟ್ಟಡಗಳ ವಿಭಾಗ, ಬೆಂಗಳೂರು.

ಸಹಾಯಕ ಕಾರ್ಯಪಾಲಕ ಅಭಿಯಂತರರವರ
ಕಛೇರಿ, ನಂ.9 ನೇ ಕಟ್ಟಡಗಳ ಉಪ ವಿಭಾಗ,
ಲೋ.ಇ. ಅನೆಕ್ಸ್ ಕಟ್ಟಡ 4ನೇ ಮಹಡಿ
ಕೆ.ಆರ್.ವೃತ್ತ ಬೆಂಗಳೂರು 01

ದೂರವಾಣಿ: 080-22125088
ಇಮೇಲ್:aeebld9@gmail.com

ಲೋಕೋಪಯೋಗಿ ಇಲಾಖೆ

ಸಂಖ್ಯೆ:ಸಕಾಇಂ:ಕಉವಿ9:ಶಾ.ಕ.ನ:ಬೆಂ:2023-24: 996

ದಿನಾಂಕ: 5-12-2023

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ
ನಂ.2, ಕಟ್ಟಡಗಳ ವಿಭಾಗ, ಬೆಂಗಳೂರು
ಕ್ರಮ ಸಂಖ್ಯೆ 5292
ದಿನಾಂಕ 05/12/2023

ಇವರಿಗೆ,

ಕಾರ್ಯಪಾಲಕ ಅಭಿಯಂತರರು,
ನಂ.2ನೇ ಕಟ್ಟಡಗಳ ವಿಭಾಗ,
ಬೆಂಗಳೂರು.

ಮಾನ್ಯರೆ,

ವಿಷಯಃ ಶ್ರೀ ಮಂಜುನಾಥಸ್ವಾಮಿ ವಿದ್ಯಾನಿಕೇತನ್, ತಲಘಟ್ಟಪುರ, ಕನಕಪುರ ಮೇನ್ ರೋಡ್, ಬೆಂಗಳೂರು ಶಾಲಾ ಕಟ್ಟಡದ ಸ್ಥಿರತೆಯ ನವೀಕರಣ ಪ್ರಮಾಣ ಪತ್ರ ನೀಡುವ ಬಗ್ಗೆ.

ಉಲ್ಲೇಖಃ
1. ಕರ್ನಾಟಕ ಸರ್ಕಾರದ ಸಚಿವಾಲಯ ವಿಕಾಸ ಸೌಧ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ:ಲೋ.ಇ.59. ಬಿಇಡಿ 2019 ದಿ:06–05–2022.
2. ಪ್ರಿನ್ಸಿಪಾಲ್, ಶ್ರೀ ಮಂಜುನಾಥಸ್ವಾಮಿ ವಿದ್ಯಾನಿಕೇತನ್, ತಲಘಟ್ಟಪುರ, ಕನಕಪುರ ಮೇನ್ ರೋಡ್, ಬೆಂಗಳೂರುರವರ ಪತ್ರ ದಿ: 28-11-2023.

**********

ಪ್ರಸ್ತಾಪಿತ ವಿಷಯಕ್ಕೆ ಸಂಬಂದಿಸಿದಂತೆ ಪ್ರಿನ್ಸಿಪಾಲ್, ಶ್ರೀ ಮಂಜುನಾಥಸ್ವಾಮಿ ವಿದ್ಯಾನಿಕೇತನ್, ತಲಘಟ್ಟಪುರ, ಕನಕಪುರ ಮೇನ್ ರೋಡ್, ಬೆಂಗಳೂರು–560062 ಶಾಲಾ ಕಟ್ಟಡದ ಸ್ಥಿರತೆ ಪ್ರಮಾಣ ಪತ್ರವನ್ನು ನವೀಕರಿಸಿ ನೀಡುವಂತೆ ಉಲ್ಲೇಖ (2)ರ ಪತ್ರದಲ್ಲಿ ಕೋರಿಕೆಯನ್ನು ಸಲ್ಲಿಸಿರುತ್ತಾರೆ.

ಸದರಿಯವರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ, ಕೆಳಕಂಡಂತೆ ಗಮನಿಸಲಾಗಿರುತ್ತದೆ,

- ಕಟ್ಟಡದ ಅನುಮೋದಿತ ನಕ್ಷೆಯಂತೆ, ಶಾಲೆಯ ಆವರಣದಲ್ಲಿ ಶ್ರೀ ಮಂಜುನಾಥಸ್ವಾಮಿ ವಿದ್ಯಾನಿಕೇತನ್, ಸಂಬಂಧಿಸಿದಂತೆ ನೆಲಮಹಡಿ ಮತ್ತು 3 ಮೇಲ್ಮಡಿಗಳನ್ನು ಒಳಗೊಂಡಿದ್ದು, ಮೆಟ್ಟಿಲುಗಳನ್ನು ಹಾಗೂ ಕಟ್ಟಡದಲ್ಲಿ ಶೌಚಾಲಯಗಳ ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ.
- ಕಟ್ಟಡದ ಅನುಮೋದಿತ ನಕ್ಷೆಯಂತೆ ಕಟ್ಟಡವನ್ನು ನಿರ್ಮಿಸಲಾಗಿದೆ ಎಂದು ಶಾಲೆಯ ಮುಖ್ಯಶಿಕ್ಷಕರು ದೃಢೀಕರಿಸಿರುತ್ತಾರೆ ಮತ್ತು ಸದರಿ ಕಟ್ಟಡದ ಸ್ಥಳವು ಭೂಕಂಪ Zone-2 ಗೆ ಸಂಬಂಧಿಸಿರುತ್ತದೆ.
- Department of Civil Enginerring, UVCE, Bangalore University, Bangalore ರವರಿಂದ ಕಟ್ಟಡದ ಸ್ಥಿರತೆಗಾಗಿ, ಎಲ್ಲಾ ಮಹಡಿಯಲ್ಲಿರುವ ಕಟ್ಟಡದ ಕಾಂಕ್ರೀಟ್ ಕಾಲಂ, ಬೀಮ್, ಸ್ಲ್ಯಾಬ್, ಮೆಟ್ಟಿಲುಗಳಿಗೆ Rebound Hammer Test & Ultrasonic Test ಗಳನ್ನು ಕೈಗೊಂಡು, ಪರೀಕ್ಷಾ ಫಲಿತಾಂಶಗಳನ್ವಯ ಕಟ್ಟಡವು ಸಧೃಡವಾಗಿರುವುದಾಗಿ, ಪ್ರೊಫೇಸರ್‌ರವರಿಂದ ಧೃಡೀಕರಿಸಲಾಗಿರುತ್ತದೆ.

ಸದರಿ ಶಾಲಾ ಕಟ್ಟಡವನ್ನು ದಿನಾಂಕ:04-12-2023 ರಂದು ಈ ಕಚೇರಿಯ ವತಿಯಿಂದ ಶಾಲೆಯ ಸಿಬ್ಬಂದಿಯವರ ಸಮ್ಮುಖದಲ್ಲಿ, ಜಂಟಿ ಪರಿವೀಕ್ಷಿಸಲಾಯಿತು. ಸದರಿ ಕಟ್ಟಡದ ಎಲ್ಲಾ ಮಹಡಿಗಳು ಹಾಗೂ ಪ್ರಮುಖ ಭಾಗಗಳನ್ನು ಪರಿಶೀಲಿಸಲಾಯಿತು ಹಾಗೂ ಈ ಸಮಯದಲ್ಲಿ ಮೇಲ್ನೋಟಕ್ಕೆ ಕಟ್ಟಡವು ಸದೃಢವಾಗಿದೆ ಎಂದು ಅಭಿಪ್ರಾಯಿಸಲಾಯಿತು. ಸದರಿ ಕಟ್ಟಡವನ್ನು ನಿರ್ವಹಣೆ ಮಾಡುವ ಜವಾಬ್ದಾರಿಯು ಸದರಿ ಸಂಸ್ಥೆಯವರದ್ದಾಗಿದ್ದು, ಈ ಪ್ರಮಾಣ ಪತ್ರವನ್ನು ಯಾವುದೇ ಸಮಯದಲ್ಲಿ ಹಿಂಪಡೆಯುವ ಹಾಗೂ ಮುಂದಿನ ದಿನಗಳಲ್ಲಿ ಕಟ್ಟಡದ ಯಾವುದಾದರೂ ಬದಲಾವಣೆ ಅಥವಾ ನಿರ್ಮಾಣ ಮಾಡಿದಲ್ಲಿ ಸದರಿ ಪ್ರಮಾಣ ಪತ್ರವು ತನ್ನಿಂತಾನೆ ರದ್ದುಗೊಳ್ಳುವ ಷರತ್ತಿಗೊಳಪಟ್ಟಿರುತ್ತದೆ ಎಂಬುದನ್ನು ಸ್ಥಳದಲ್ಲಿ ಹಾಜರಿದ್ದ ಶಾಲಾ ಮುಖ್ಯಶಿಕ್ಷಕರಿಗೆ ತಿಳಿಸಲಾಯಿತು.

ಮೇಲಿನ ಅಂಶಗಳನ್ನು ಪರಿಗಣಿಸಿ, ಶ್ರೀ ಮಂಜುನಾಥಸ್ವಾಮಿ ವಿದ್ಯಾನಿಕೇತನ್, ತಲಘಟ್ಟಪುರ, ಕನಕಪುರ ಮೇನ್ ರೋಡ್, ಬೆಂಗಳೂರು ಶಾಲಾ ಕಟ್ಟಡದ ಸದೃಢತೆ ಪ್ರಮಾಣ ಪತ್ರವನ್ನು ನವೀಕರಿಸಬಹುದು ಮಾಹಿತಿಯನ್ನು ತಮ್ಮ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯಪಾಲಕ ಅಭಿಯಂತರರು
ನಂ.9ನೇ ಕಟ್ಟಡಗಳ ಉಪ ವಿಭಾಗ, ಬೆಂಗಳೂರು.